ಆಲಮಟ್ಟಿ ಅಣೆಕಟ್ಟಿನಿಂದ ಬಾಗಲಕೋಟೆ ನಗರ ಮುಳುಗಡೆ

೧೮೫೫ ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದ್‌ಗುಡ್ಡಾ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಲಮಟ್ಟಿ ಅಣ್ಣೆಕಟ್ಟಿನಿಂದಾಗಿ ಬಾಗಲಕೋಟೆ ನಗರದ ಮುಳುಗಡೆ ತಪ್ಪಿಸಲು ಸರ್ಕಾರದವರು ಏನಾದರೂ ಯೋಜನೆ ರೂಪಿಸಿದ್ದಾರೆಯೇ ;

ಆ) ಹಾಗಿದ್ದಲ್ಲಿ ಅದರ ವಿವರಗಳೇನು ;

ಇ) ಇಲ್ಲದಿದ್ದಲ್ಲಿ ಮುಳುಗಡೆಗೊಳಗಾಗುವ ಜನರ ಪುನರ್ವಸತಿ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ.— (ಲೋಕೋಪಯೋಗಿ ಮತ್ತು ನಿರಾವರಿ ಮಂತ್ರಿಗಳು)

ಅ) ಇಲ್ಲ.

ಆ) 'ಆ' ನಲ್ಲಿ ತಿಳಿಸಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ಈ ವಿಚಾರದಲ್ಲಿ ಕೆಲವು ವಿವರಣೆಗಳನ್ನು ಕೊಡಬೇಕಾಗಿದೆ. ಆಲಮಟ್ಟಿ ಅಣೆಕಟ್ಟನ್ನು ಕ್ರಿಸ್ಟ್ ಲೆವೆಲ್‌ವರೆಗೆ ಕಟ್ಟಿದರೆ ಭಾಗಲಕೋಟೆ ಮುಳುಗಡೆಯಾಗುತ್ತದೆಂಬುದು ತಜ್ಞರ ಅಭಿಪ್ರಾಯ. ಬಾಳೇಕುಂದರಗಿಯವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿದಂಥ ಸಮಿತಿ ಕೂಡ ಅದೇ ಅಭಿಪ್ರಾಯವನ್ನು ಪ್ರಕ್ತ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟಿದೆ. ಸರ್ಕಾರದವರು ವರದಿಯ ಮೇಲೆ ಏನೊಂದು ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ಮುಳುಗಡೆಯಾಗತಕ್ಕ ಮನೆಗಳವರಿಗೆ ಬೇರೆ ಕಡೆ ನಿವೇಶನ ಕೊಡಬಾರದೆಂಬ ಆದೇಶ ನಗರಸಭೆಯವರಿಗೆ ಹೋಗಿದೆಯೇ ? ನಿವೇಶನ ಕೊಡದೇ ಇದ್ದರೆ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಮತ್ತು ೩೦,೦೦೦ ಜನಸಂಖ್ಯೆ ಇದ್ದಂಥ ಕಾಲದಲ್ಲಿ ಒದಗಿಸಿದ್ದಂಥ ನಾಗರೀಕ ಸೌಲಭ್ಯಗಳೇ ಇವತ್ತಿಗೂ ಇರುವುದರಿಂದ ಬೆಳೆದಿರುವಂಥ ಪಟ್ಟಣದ ಜನರಿಗೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇವತ್ತು ಬಾಗಲಕೋಟೆಯಲ್ಲಿ ೮೧,೦೦೦ ಜನಸಂಖ್ಯೆ ಇದೆ. ಅದು ಒಂದು ದೊಡ್ಡ ಪಟ್ಟಣ. ಬಾಗಲಕೋಟೆಯ ಜನತೆಯ ತಲೆಯಮೇಲೆ ಒಂದು ತೂಗುಕತ್ತಿ ಇದ್ದಹಾಗೆ ಇದೆ. ಇದು ಅಲ್ಲಿನ ಜನತೆಯ ಜೀವನ್ಮರಣದ ಪ್ರಶ್ನೆಯಾಗಿದೆ. ಆದ್ದರಿಂದ ಜನತೆಯಲ್ಲಿರುವ ಸಂದೇಹವನ್ನು ಪರಿಹರಿಸಲಿಕ್ಕೆ ಸರ್ಕಾರದವರು ತೆಗೆದುಕೊಂಡಿರುವಂಥ ಕಾರ್ಯಕ್ರಮಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ.—ಇದರ ಬಗ್ಗೆ ಸರ್ಕಾರ ತೀವ್ರಗತಿಯಲ್ಲಿ ನಿರ್ಣಯ ತೆಗೆದುಕೊಳ್ಳುತ್ತಿದೆ ಕನಿಷ್ಟ ಒಂದು ತಿಂಗಳೊಳಗೆ ನಿರ್ಣಯ ಮಾಡುತ್ತೇವೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಈ ವಿಷಯ ಎರಡು ಸಾರಿ ಸಚಿವ ಸಂಪುಟದ ಸಭೆಯಲ್ಲಿ ಚರ್ಚೆಯಾಗಿದೆ. ಬಾಳೇಕುಂದರಿಗಿಯವರು ಕೊಟ್ಟಿರುವ ವರದಿಯಲ್ಲಿ ಬಾಗಲಕೋಟೆಯ ಸುತ್ತ ನಗರದೊಳಗೆ ನೀರು ನುಗ್ಗದಂತೆ ವ್ಯವಸ್ಥೆ ಮಾಡುವುದು, ಅಥವಾ ಊರನ್ನು ಬೇರೆ ಕಡೆಗೆ ಬದಲಾಯಿಸುವುದು ಈ ಎರಡು ಅಂಶಗಳು ಸಚಿವ ಸಂಪುಟದ ಸಭೆಯ ಮುಂದಿವೆ. ಇವತ್ತು ಸ್ಥಳೀಯ ಜನರು ಕೂಡ ಊರನ್ನೇ ಬೇರೆ ಕಡೆ ಬದಲಾಯಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಹೊದಲು ಇದಕ್ಕೆ ವಿರೋಧ ಇತ್ತು. ಇದಕ್ಕೆ ಕಷ್ಟವನ್ನು ಅಲ್ಲಿನ ಜನತೆ ಕೂಡ ಅರ್ಥ ಮಾಡಿಕೊಂಡಿದ್ದಾರೆ. ಊರಿಗೆ ಹೊಂದಿಕೊಂಡಂತೆ ಸುಮಾರು ೬೦ ಅಡಿ ನೀರು ನಿಲ್ಲುತ್ತದೆ. ಇದರಿಂದ ಅಲ್ಲಿ ಅಪಾಯದ ಪರಿಸ್ಥಿತಿಯಾವಾಗಲೂ ಇರುತ್ತದೆ. ಇದು ಬಹಳ ಜಟಿಲವಾದ ಸಮಸ್ಯೆಯಾಗಿರುವುದರಿಂದ ಮತ್ತು ಪಟ್ಟಣವನ್ನು ಬೇರೆ ಕಡೆಗೆ ಬದಲಾಯಿಸೇಕಾಗಿರುವುದರಿಂದ ಇದಕ್ಕೆ ಸುಮಾರು ೧೦೦ ಕೋಟಿ ರೂಪಾಯಿಗಿಂತಲೂ ಜಾಸ್ತಿ ಖರ್ಚು ಬರುತ್ತದೆ. ಬಾಗಲಕೋಟೆ ಸುತ್ತಲೂ ಪಾಕತಕ್ಕ ಗೋಡೆಗೆ ಸುಮಾರು ೬೦-೭೦ ಕೋಟಿ ರೂಪಾಯಿ ಆಗುವುದರಿಂದ ಜನತೆಯಲ್ಲಿರುವ ತಕ್ಕ ಮಾನಸಿಕ ಸಂತಯವನ್ನು ಹೋಗಲಾಡಿಸಲು ಖಾಯಂ ಆಗಿ ಊರನ್ನೇ ಬದಲಾಯಿಸುವುದು

ಸೂಕ್ತ ಎನ್ನುವುದು ಬಹುಜನರ ಅಭಿಪ್ರಾಯವಾಗಿದೆ. ಇವೆರಡು ವಿಷಯಗಳನ್ನು ಗಮನದಲ್ಲಿಟ್ಟು ಕೊಂಡು ಸ್ಥಳೀಯ ಶಾಸಕರನ್ನು ಮತ್ತು ಸ್ಥಳೀಯ ಮುಖಂಡರುಗಳನ್ನು ಕರೆಸಿ ವಿಚಾರ ಮಾಡಿ, ಒಂದು ತಿಂಗಳೊಳಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂಗೌಡ ದರ್ಶನಪೂರ.—ಇದು ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಹಂತದಲ್ಲಿ ಬರುತ್ತೆ. ಮೊದಲನೇ ಹಂತದಲ್ಲಿ ಬರುವ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ. ಇದು ವರೆಗೆ ಮುನ್ನೂರು ಎಕರೆಗೆ ಸಹ ನೀರು ಕೊಡುವುದಕ್ಕಾಗಿಲ್ಲ. ಆಲಮಟ್ಟಿ ಅಣೆಕಟ್ಟನ್ನು ಕಟ್ಟತಕ್ಕಂಥ ಕಾಲದಲ್ಲಿ ಸರ್ಕಾರದವರು ಬಾಗಲಕೋಟೆಯ ಜನತೆಯ ಮನಸ್ಸಿನ ಮೇಲೆ ಬುಷ್ಪರಿಣಾಮ ಬೀರದಂತೆ ಸ್ಪಷ್ಟವಾದ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಜೊತೆಗೆ ನಾರಾಯಣಪುರ ಅಣೆಕಟ್ಟು ಆಗತಕ್ಕಂಥ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಈ ವಿಚಾರದಲ್ಲಿ ಯಾವ ಸಂಶಯವನ್ನು ಪಡಬೇಕಾಗಿಲ್ಲ ಹಣದ ಕೊರತೆ ಇಲ್ಲ. ಮಾನ್ಯ ಬಾಪೂಗೌಡರು ಇದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ ಕೊಟ್ಟಿರತಕ್ಕಂಥ ಹಣ ಖರ್ಚಾಗಿಲ್ಲವೆಂದು ಅವರೇ ಹೇಳಿದ್ದಾರೆ. ಇದಕ್ಕೆ ನಾಲ್ಕಾರು ಕಾರಣಗಳು ಇರುವುದು ಅವರಿಗೂ ಗೊತ್ತಿದೆ. ೧೯೮೫-೮೬ ವರಗೆ ಆಲಮಟ್ಟಿ ಅಣೆಕಟ್ಟನ್ನು ಕ್ರೆಸ್ಟ್‌ಲೆವೆಲ್‌ವರೆಗೆ ಪೂರೈಸಿದರೆ ಬಾಗಲ ಕೋಟೆಗೆ ನೀರು ಬರುತ್ತದೆಂದು ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಇನ್ನು ಎರಡು ವರ್ಷದೊಳಗೆ ಬಾಗಲಕೋಟೆ ಪಟ್ಟಣವನ್ನು ಬೇರೆ ಕಡೆ ಬದಲಾಯಿಸುವುದಕ್ಕೆ ಬಾಳೇಕುಂದಿರಿಗಿ ವರದಿ ಪ್ರಕಾರ ನಿರ್ಣಯವನ್ನು ಅತ್ಯಂತ ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ. ನಿಮ್ಮನ್ನು ಕರೆಸಿ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ. ನಾರಾಯಣಪುರ ಡ್ಯಾಂ ನಿಂದ ಎಷ್ಟು ಎಕರೆಗೆ ನೀರು ಕೊಡುತ್ತೀರಾ ಎಂದು ಕೇಳಿದ್ದೀರಿ; ಇದು ತಾತ್ಕಾಲಿಕವಾದಂಥ ವಿಳಂಬ ತಪ್ಪಿ ಸೂಚನೆಯನ್ನು ಗಮನದಲ್ಲಿಟ್ಟು ಕೊಂಡು ಅತ್ಯಂತ ಚುರುಕಿನಿಂದ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮೊದಲನೇ ಸ್ಟೇಜ್‌ನಲ್ಲಿ ೧೬೨೦ ಸಂಸಾರಗಳಿಗೆ ಪರಿಹಾರ ಕೊಡಲಿಕ್ಕೆ ತೀರ್ಮಾನ ಮಾಡಿತ್ತು. ೨ನೇ ಸ್ಟೇಜ್‌ನಲ್ಲಿ ೧೭೮೦ ಸಂಸಾರಿಗಳಿಗೆ ಪರಿಹಾರ ಕೊಡಲಿಕ್ಕೆ ತೀರ್ಮಾನ ಮಾಡಲಾಗಿತ್ತು. ಮೊದಲನೇ ಸ್ಟೇಜ್‌ನಲ್ಲೂ ಕೂಡ ೧೭೮೦ ಸಂಸಾರಗಳಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ೧೮೬ (೫೧)

ಉಪಾಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆಯನ್ನು ಕ್ಯಾರಿ ಓವರ್ ಮಾಡಲಾಗಿದೆ.

ಗೋಕಾಕ್ ಮತ್ತು ಕೊಣನೂರುಗಳಲ್ಲಿ ಉರುವಲು ಕಟ್ಟಿಗೆ ಅಭಾವದ ಬಗ್ಗೆ

೧೮೭. ಎಂ. ಎಲ್. ಮುತ್ತಣ್ಣವರ್ (ಗೋಕಾಕ್).— ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಗೋಕಾಕ್ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಪೂರೈಕೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಇದಕ್ಕೆ ಕಾರಣಗಳೇನು ?

(ಇ) ಅರಣ್ಯ ಇಲಾಖೆಯವರ ನಿರ್ಲಕ್ಷದಿಂದಾಗಿ ಈ ವಿಷಯದಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದ್ದು ಈ ಸಮಸ್ಯೆಯನ್ನು ಬಗೆಹರಿಸಲು ಕೈಗೊಳ್ಳಲು ಉದ್ದೇಶಿಸುವ ಕ್ರಮಗಳೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಗೋಕಾಕ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಕೊರತೆ ಇರುವುದರ ಬಗ್ಗೆ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.